ಸಾರಾಯಿ ಹಾಗೂ ದೇಶೀಯ ತಯಾರಿ ವಿದೇಶಿ ಮದ್ಯಗಳ ಮೇಲೆ ಬೆಲೆ ಮುದ್ರಿಸಿಲ್ಲದ ಬಗ್ಗೆ

ಶ್ರೀ ಕೆ. ಬಿ. ಉಮ್ಮರ್‌ಬ್ಬ (ವಿಟ್ಲ) —ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಮಾರುಕಟ್ಟೆಗೆ ಸರಬರಾಜಾಗುತ್ತಿರುವ ಸಾರಾಯಿ ಹಾಗೂ ದೇಶಿಯ ತಯಾರಿ ವಿದೇಶಿ ಮದ್ಯಗಳ ಬಾಟಲ್‌ಗಳ ಮೇಲೆ ಬೆಲೆ, ಗುಣಮಟ್ಟ ತೆರಿಗೆ ಹಾಗೂ ತಯಾರಿಸಲ್ಪಟ್ಟ ದಿನಾಂಕ ಇವುಗಳ ವಿವರಗಳನ್ನು ಮುದ್ರಿಸಲಾಗುತ್ತಿದೆಯೇ ಅಥವಾ ಪ್ರಕಟಿಸಲಾಗುತ್ತಿದೆಯೇ ?

ಆ) ಈ ರೀತಿಯ ಪ್ರಕಟಣೆಗಳು ಅವಶ್ಯವೆಂದು ಸರ್ಕಾರವು ಭಾವಿಸುತ್ತದೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಇಲ್ಲ. ಆದರೆ ಕರ್ನಾಟಕ ಅಬ್ಕಾರಿ (ಮದ್ಯವನ್ನು ಸೀಸೆಯಲ್ಲಿ ತುಂಬುವ) ನಿಯಮ ೧೯೬೭ ರ ನಿಯಮ ೧೫ (೩) ಮತ್ತು ಕರ್ನಾಟಕ ಅಬಕಾರಿ (ಸಾರಾಯಿ ತಯಾರಿಕೆ ಮತ್ತು ಸೀಸೆಯಲ್ಲಿ ತುಂಬುವ ನಿಯಮ ೧೯೮೦ರ ನಿಯಮ ೧೫ (೪)ರ ಅನ್ವಯ ಪ್ರತಿಬಾಟಲ್ ಮೇಲೆ ವ್ಯಾಪಾರಿ ಗುರುತು ಮದ್ಯದ ವಿವರ, ಸಾಮರ್ಥ್ಯ, ಉತ್ಪಾದನೆ ಮತ್ತು ಬಾಟಲಲ್ಲಿ ತುಂಬಿದ ಸ್ಥಳ, ಉತ್ಪಾದನೆ ಮಾಡಿದವರ ಹೆಸರು ಮತ್ತು ವಿಳಾಸವುಳ್ಳ, ಗುರುತಿನ ಚೀಟಿಯನ್ನು ಅಂಟಿಸಲಾಗುವುದು ಗುರುತಿನ ಚೀಟಿಯು ಮೇಲೆ ಯಾವ ಪರವಾನಗಿದಾರನಿಂದ ಉತ್ಪಾದಿಸಲಾಗಿದೆ ಎಂಬುದನ್ನು ಕೂಡ ಮುದ್ರಿಸಲಾಗುವುದು. ಮದ್ಯದ ಬೆಲೆ, ತೆರಿಗೆ ಕಟ್ಟಿರುವ ಬಗ್ಗೆ ಪ್ರಕಟಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲವಾದ್ದರಿಂದ ಅವುಗಳನ್ನು ಗುರುತಿನ ಚೀಟಿಯಲ್ಲಿ ಪ್ರಕಟಿಸುವಂತೆ ಒತ್ತಾಯ ಪಡಿಸಲಾಗುತ್ತಿಲ್ಲ.

ಆ) ಇಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರಿ ಸಂಘಗಳಲ್ಲಿ ವಂಚನೆ

೪೦೦೮ ಶ್ರೀ ಬಿ. ಎಂ. ಇದಿನಬ್ಬ, (ಉಳ್ಳಾಲ). —ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಸಗಟು ವ್ಯಾಪಾರ ಸಂಘ ನಿ. ಮಂಗಳೂರು (ಜನತಾ ಬಜಾರ್) ದಕ್ಷಿಣ ಕನ್ನಡ ಜಿಲ್ಲಾ ಕೃಷಿಕರ ವ್ಯಾಪಾರ ಸಂಘಗಳಲ್ಲಿ ೧೯೮೫-೮೬, ೧೯೮೬-೮೭ ಮತ್ತು ೧೯೮೭-೮೮ರಲ್ಲಿ ಸರಕು ಅಥವಾ ಹಣದ ರೂಪದಲ್ಲಿ ನಡೆದ ವಂಚನೆ ಪ್ರಕರಣಗಳೆಷ್ಟು ಹಾಗೂ ಎಲ್ಲೆಲ್ಲಿ ?

ಆ) ಅಂತಹ ಪ್ರಕರಣಗಳ ಬಗ್ಗೆ ದಾವೆ ಮಾಡಲಾಗಿದೆಯೇ ? ತಪ್ಪಿತಸ್ಥರಿಗೆ ಶಿಕ್ಷೆ ದಂಡನೆ ಆಗಿದೆಯೇ ?

ಇ) ವಂಚನೆಗಳಾಗದಂತೆ ಸರ್ಕಾರದವರು ಮುಂದೆ ಯಾವ ಕ್ರಮ ತೆಗೆದುಕೊಳ್ಳಲಿದ್ದಾರೆ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಸಗಟು ವ್ಯಾಪಾರ ಸಂಘ ನಿ. ಮಂಗಳೂರು (ಜನತಾ ಬಜಾರ್) ಇದರಲ್ಲಿ ೧೯೮೫-೮೬, ೧೯೮೬-೮೭ ಮತ್ತು ೧೯೮೭-೮೮ರಲ್ಲಿ ಯಾವುದೇ ಸರಕು ಮತ್ತು ಹಣದ ರೂಪದಲ್ಲಿ ದುರುಪಯೋಗ ಪ್ರಮಂಚನೆ ಪ್ರಕರಣಗಳು ನಡೆದಿರುವುದಿಲ್ಲ. ದಕ್ಷಿಣ ಕನ್ನಡ ಕೃಷಿಕರ ವ್ಯಾಪಾರ ಸಹಕಾರ ಸಂಘದಲ್ಲಿ ೧೯೮೫-೮೬ ಮತ್ತು ೧೯೮೬-೮೭ನೇ ಸಾಲಿನಲ್ಲಿ ಯಾವುದೇ ಸರಕು ಮತ್ತು ಹಣದ ರೂಪದಲ್ಲಿ ದುರುಪಯೋಗ ವಂಚನೆ ಪ್ರಕರಣಗಳು ನಡೆದಿರುವುದಿಲ್ಲ, ಆದರೆ ೧೯೮೭-೮೮ನೇ ಸಾಲಿನಲ್ಲಿ ಸಂಘದ ನಗದು ಗುಮಾಸ್ತರಾದ ಶ್ರೀ ಬಿ. ಪಜ್ಯಕುಮಾರ್‌ರವರು ರೂ. ೫೯,೦೫೭.೬೩ನ್ನು ದುರುಪಯೋಗ ಮಾಡಿದ್ದರು.

ಆ) ಶ್ರೀ ಬಿ. ಪಜ್ಜಕುನ್ನೂರ್ ವಿರುದ್ಧ ಯಾವುದೇ ದಾವೆ ಹೂಡಿಲ್ಲ. ಆದರೆ ದುರುಪಯೋಗ ವಾದ ಪೂರಾ ಹಣವನ್ನು ಮೂರು ಕಂತುಗಳಲ್ಲಿ ೧೫ ದಿನಗಳೊಳಗಾಗಿ ವಸೂಲಿ ಮಾಡಲಾಗಿದೆ. ಇವರನ್ನು ಹಣ ದುರುಪಯೋಗ ಪಡಿಸಿಕೊಂಡ ತಪ್ಪಿಗಾಗಿ ಅಮಾನತ್ತಿನಲ್ಲಿಡಲಾಗಿತ್ತು. ಹಾಗೂ ಇವರ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಹ ತಡೆ ಹಿಡಿಯಲಾಗಿದೆ.

ಇ) ಹಣ ದುರುಪಯೋಗವನ್ನು ತಡೆಯಲು ಮುಂಜಾಗ್ರತೆ ಕ್ರಮವಾಗಿ ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ಸಂಘದ ಪರಿವೀಕ್ಷಣೆ ಮಾಡಲು ಹಾಗೂ ಸಂಘಗಳಿಗೆ ಹಠಾತ್ ಭೇಟಿ ನೀಡಿ ತನಿಖೆ ಮಾಡಲು ಸೂಚನೆ ನೀಡಲಾಗಿದೆ. ಸಂಘದಲ್ಲಿ ವಂಚನೆ ಪ್ರಕರಣಗಳನ್ನು ತಪ್ಪಿಸುವ ದೃಷ್ಟಿಯಿಂದ ಸಂಘಗಳ ನೌಕರರಿಂದ ಅವರವರ ಹುದ್ದೆಗಳಿಗನುಸಾರವಾಗಿ ಭದ್ರತಾ ಠೇವಣಿ ಹಾಗೂ ಜಾಮೀನು ಬಾಂಡುಗಳನ್ನು ತೆಡೆಯಲು ತಿಳಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ನ್ಯಾಯ ಬೆಲೆಯ ಅಂಗಡಿಗಳು

೪೦೦೬. ಶ್ರೀ ಬಿ. ಎಂ. ಇದಿನಬ್ಬ (ವಿಟ್ಲ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ನ್ಯಾಯ ಬೆಲೆ ಅಂಗಡಿಗಳ ಸಂಖ್ಯೆ ಎಷ್ಟು ?

ಆ) ಅದರಲ್ಲಿ ಖಾಸಗಿ ನ್ಯಾಯಬೆಲೆ ಅಂಗಡಿಗಳೆಷ್ಟು ?
ಸಹಕಾರ ಸಂಘಗಳೆಷ್ಟು ?

ಇ) ೧೯೮೫ ರಿಂದ ಈವರೆಗೆ ಈ ನ್ಯಾಯ ಬೆಲೆಯ ಅಂಗಡಿಗಳಲ್ಲಿ ಗ್ರಾಹಕರಿಗೆ ವಂಚನೆ ಮಾಡಿದ ಪ್ರಕರಣಗಳೆಷ್ಟು ?

ಈ) ವಂಚನೆಯಲ್ಲಿ ತೊಡಗಿದ್ದ ಎಷ್ಟು ನ್ಯಾಯಬೆಲೆ ಅಂಗಡಿಗಳನ್ನು ಮುಚ್ಚಲಾಗಿದೆ, ಹಾಗೂ ಪರವಾನಗಿಯನ್ನು ರದ್ದು ಪಡಿಸಲಾಗಿದೆ (ಇವುಗಳ ಪೂರ್ಣ ವಿವರ ನೀಡುವುದು)

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ೮೫೯

ಆ) ೨೭೬
೫೮೩

ಇ) ೧೧

ಈ) ೩ ನ್ಯಾಯಬೆಲೆ ಅಂಗಡಿಗಳನ್ನು ಮುಚ್ಚಲಾಗಿದೆ. ಇವುಗಳ ಪೈಕಿ ಒಂದು ನ್ಯಾಯಬೆಲೆ ಅಂಗಡಿಯ ಪರವಾನಗಿಯನ್ನು ರದ್ದು ಗೊಳಿಸಲಾಗಿದೆ.

ವಿವರಗಳು ಈ ಕೆಳಗಿನಂತಿವೆ.—

೧ ಕಾರ್ಕಳ ತಾಲ್ಲೂಕು ಮಾರೂರು ಗ್ರಾಮದ ಶ್ರೀ ಶಿವಶಂಕರ್ ಭಟ್ಟ ಶಂಕರ್ ಎಂಬುವವರು ನಡೆಸುತ್ತಿದ್ದ ನ್ಯಾಯಬೆಲೆ ಅಂಗಡಿಯನ್ನು ಆಹಾರ ಕೋಶದ ಅಧಿಕಾರಿಗಳು ಧಾಳಿ ನಡೆಸಿ ಅಕ್ರಮ ವ್ಯವಹಾರ ನಡೆದಿದೆಯೆಂದು ಪರವಾನಗಿಯನ್ನು ರದ್ದು ಮಾಡಿದ್ದಾರೆ.

೨ ಕಾರ್ಕಳ ತಾಲ್ಲೂಕು ಎರ್ಲಪಾಡಿ ಗ್ರಾಮದ ಶ್ರೀ ದಾವೋದರ ಶೆಟ್ಟಿ ಎಂಬುವವರು ಆಹಾರ ಧಾನ್ಯಗಳನ್ನು ಸರಿಯಾಗಿ ವಿತರಣೆ ಮಾಡುತ್ತಿಲ್ಲವಾದ್ದರಿಂದ ಇವರು ನಡೆಸುತ್ತಿದ್ದ ನ್ಯಾಯಬೆಲೆ ಅಂಗಡಿಯನ್ನು ಮುಚ್ಚಲಾಗಿದೆ.

೩ ಉಡುಪಿ ತಾಲ್ಲೂಕು ಯಲ್ಲೂರು ಗ್ರಾಮದ ಶ್ರೀ ಪ್ರಭುಲ್ಲ ಶೆಟ್ಟಿಯವರು ಆಹಾರ ಧಾನ್ಯಗಳನ್ನು ಸರಿಯಾಗಿ ವಿತರಣೆ ಮಾಡುತ್ತಿಲ್ಲ ವೆಂದು ಅವರು ನಡೆಸುತ್ತಿದ್ದ ನ್ಯಾಯಬೆಲೆ ಅಂಗಡಿಯನ್ನು ಮುಚ್ಚಲಾಗಿದೆ. ಇನ್ನುಳಿದ ೮ ಪ್ರಕರಣಗಳಲ್ಲಿ ೫೬೪೭-೯೦ ರೂ. ಗಳ ಆಹಾರ ಧಾನ್ಯಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.